ಹೇಳುತ್ತೇನೆ.

ಶ್ರೀ ಸಿದ್ಧರಾಮಯ್ಯ: ಸರ್ಕಾರ ಸತ್ತಿದ್ದರೆ ನಾವು ನೀವು ಇಲ್ಲಿ ಕುಳಿತುಕೊಳ್ಳುತ್ತಲೇ ಇರಲಿಲ್ಲವಲ್ಲಾ? ಸರ್ಕಾರ ಸುಭದ್ರವಾಗಿರುವುದರಿಂದ ನಾವು ಇಲ್ಲಿ ಕುಳಿತಿದ್ದೇವೆ.

ಶ್ರೀ ಕೆ.ಎಸ್.ಈಶ್ವರಪ್ಪ: ಒಬ್ಬರು ಶಾಸಕರಾಗಿ ಪ್ರಶ್ನೆ ಕೇಳುತ್ತಿದ್ದಾರೆ, ರಸ್ತೆಯಲ್ಲಿ ಹೋಗುವ ಯಾರೋ ಬಂದು ಇಲ್ಲಿ ಕೇಳುತ್ತಿಲ್ಲ. ಇದು ಇವತ್ತಿನ ಪ್ರಶ್ನೆಯಲ್ಲ, ಇದರ ಬಗ್ಗೆ ನೂರಾರು ಬಾರಿ ಎಚ್ಚರಿಕೆ ನೀಡಿದ್ದೇವೆ, ತಾವು ಮನಸ್ಸು ನೋವು ಮಾಡಿಕೊಂಡಿದ್ದೀರಿ, ಮಾನ್ಯ ಸದಸ್ಯರ ಪ್ರಶ್ನೆಯೇನು ಎಂಬುದನ್ನು ಕೇಳುವ ಆಸಕ್ತಿ ಇವರಿಗೆ ಇಲ್ಲವೆಂದರೆ ಹೇಗೆ?

ಅಧ್ಯಕ್ಷರು: ತಾವು ತಮ್ಮ ಅಸಮಾಧಾನವನ್ನು ತೀವ್ರವಾಗಿ ವ್ಯಕ್ತಮಾಡಿದ್ದೀರಿ. ಮಾನ್ಯ ಜಯರಾಮಶೆಟ್ಟಿಯವರು ಪ್ರಸ್ತಾಪ ಮಾಡಿರುವ ವಿಚಾರದ ಬಗ್ಗೆ ನಾನೇ ಉತ್ತರ ತರಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ: ನಾವು ಇನ್ನು ಯಾವ ರೀತಿ ಅವರಿಗೆ ಹೇಳಬೇಕು, ಅವರಿಗೆ ಪ್ರಶ್ನೆ ಕೇಳುವ ಆಸಕ್ತಿ ಇಲ್ಲ, ಆ ಸಮಸ್ಯೆ ಪರಿಹಾರ ಮಾಡಲು ವಿಲ್‌ಪವರ್ ಇಲ್ಲ, ಆ ಆಸಕ್ತಿ ಕೂಡ ಇಲ್ಲ.

ಅಧ್ಯಕ್ಷರು: ನಾನು ಉತ್ತರ ತರಿಸಿಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಸಣ್ಣ ಉಳಿತಾಯದ ಖಾತಾದಾರರಿಗೆ ಕಮೀಷನ್ ಕೊಟ್ಟಿಲ್ಲ ಎಂಬುದು ಮಾನ್ಯ ಸದಸ್ಯರ ವಿಚಾರವಾಗಿದೆ. 1996-97 ಮತ್ತು 1997-98ಕ್ಕೆ ಸಂಬಂಧಿಸಿದಂತೆ ಕಮಿಷನನ್ನು ಕೊಟ್ಟಿಲ್ಲ. ಅದಕ್ಕೆ ಈ ವರ್ಷ ಹೆಚ್ಚು ಹಣವನ್ನು ಒದಗಿಸಿಕೊಂಡಿದ್ದೇವೆ. ಈ ವರ್ಷ ಹೋದ ವರ್ಷದ ಕಮೀಷನನ್ನೂ ಕೊಡುತ್ತೇವೆ.

ಛ) ಮಲಪ್ರಭಾ ನದಿಗೆ ಮಹದಾಯಿ ನದಿಯ ನೀರನ್ನು ಹರಿಸುವ ವಿಚಾರದಲ್ಲಿ ಗೋವಾ ಮತ್ತು ಕರ್ನಾಟಕ ಸರ್ಕಾರಗಳೆರಡು ಸೇರಿ ಜಂಟಿಯಾಗಿ ಅಣೆಕಟ್ಟನ್ನು ನಿರ್ಮಾಣ ಮಾಡುವ ವಿಚಾರ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಮಾನ್ಯ ಅಧ್ಯಕ್ಷರೆ, ಈ ತಿಂಗಳ 25ರಂದು ಮಹದಾಯಿ ಯೋಜನೆಗೆ ಸಂಬಂಧಪಟ್ಟಂತೆ ಒಂದು ಸಭೆಯಾಗಿದೆ. ಮಲಪ್ರಭಾ ನದಿಗೆ ಮಹದಾಯಿ ನದಿಯ ನೀರನ್ನು ಹರಿಸುವ ವಿಚಾರದಲ್ಲಿ ಗೋವಾ ಮತ್ತು ಕರ್ನಾಟಕ ಸರ್ಕಾರಗಳೆರಡೂ ಸೇರಿ ಜಂಟಿಯಾಗಿ ಅಣೆಕಟ್ಟನ್ನು ನಿರ್ಮಾಣ ಮಾಡುವ ಬಗ್ಗೆ ಸುಮಾರು ಇಪ್ಪತ್ತು ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಇದರ ಬಗ್ಗೆ ಅಧ್ಯಯನ

ಮಾಡಲು ಗೋವಾ ಮತ್ತು ಕರ್ನಾಟಕ ಸರ್ಕಾರಗಳೆರಡು ಒಪ್ಪಿದೆಯೆಂದು ನಿನ್ನೆಯ ಪತ್ರಿಕೆಯಲ್ಲಿ ಬಂದಿದೆ. ಕರ್ನಾಟಕ ಸರ್ಕಾರದ ಪರವಾಗಿ ನೀರಾವರಿ ಸಚಿವರಾದ ಮಾನ್ಯ ನಾಗೇಗೌಡರು ಮತ್ತು ನೀರಾವರಿ ಸಲಹೆಗಾರರಾದ ಕೆ.ಸಿ.ರೆಡ್ಡಿಯವರು ಹಾಗೂ ಸಂಬಂಧಪಟ್ಟ ಅಧಿಕಾರಿಗಳೆಲ್ಲರೂ ಆ ಸಭೆಯಲ್ಲಿ ಭಾಗವಹಿಸಿದ್ದಾರೆ. ಅಧ್ಯಯನ ಮಾಡುವುದಕ್ಕೆ ಸಮಿತಿಯೊಂದನ್ನು ರಚನೆ ಮಾಡಿದ್ದಾರೆ. ಈ ಸಮಿತಿಗೆ ಎರಡೂ ಸರ್ಕಾರ ತೀರ್ಮಾನ ಮಾಡಿದೆ ಎಂದು ಸುದ್ದಿ ಇದೆ. ಆದರೆ ಕೆಲವು ದಿವಸಗಳ ಹಿಂದೆ ಗೋವಾ ಸರ್ಕಾರ ಬಹಳ ಸ್ಪಷ್ಟವಾಗಿ ಇದನ್ನು ನಿರಾಕರಣೆ ಮಾಡಿತು. ನಾವು ಯಾವುದೇ ಕಾರಣದಿಂದ ಮಹದಾಯಿ ನದಿ ನೀರನ್ನು ಮಲಪ್ರಭ ನದಿಗೆ ಬಿಡುವ ಯೋಜನೆ ಒಪ್ಪುವುದಕ್ಕೆ ನಾವು ತಯಾರಿಲ್ಲ ಎಂದು ಸ್ಪಷ್ಟವಾಗಿ ಗೋವ ಸರ್ಕಾರ ನಿರಾಕರಣೆ ಮಾಡಿತು. ಇದರಲ್ಲಿ ಇನ್ನೊಂದು ಸಮಿತಿಯೂ ಕೂಡ ರಚನೆಯಾಗಿದೆ. ನೀರಿ ಎನ್ನತಕ್ಕಂತಹ ಮಹಾರಾಷ್ಟ್ರದ ಸಂಸ್ಥೆ ಅದು ತನಿಖೆ ಮಾಡಿ ಬೇರೆ ಬೇರೆ ವಿಷಯಗಳ ಬಗ್ಗೆ ವರದಿಯನ್ನು ಸಲ್ಲಿಸಿರತಕ್ಕಂತಹ ಆಧಾರದ ಮೇಲೆ ಇವತ್ತು ಆ ಸಭೆಯಲ್ಲಿ ಚರ್ಚೆಯಾಗಿ ಬಂದಿದೆ. ಮಲಪ್ರಭ ಹಾಗೂ ಮಹದಾಯಿಗೆ ಸಂಬಂಧಿಸಿದಂತೆ ಪರಿಸರ ಮತ್ತು ಮೀನುಗಾರಿಕೆ ಮೇಲೆ ಆಗುವ ಪರಿಣಾಮಗಳಿಗೆ ಸಂಬಂಧಿಸಿದಂತೆ ನಾಗಪುರದ ನೀರಿ ಸಂಸ್ಥೆ ಅಧ್ಯಯನ ನಡೆಸಿದ ವರದಿ ನೋಡಿದ ನಂತರ ಮಾತುಕತೆ ನಡೆದಿದ್ದ ವಿಷಯದಲ್ಲಿ ಬಹಳ ಪ್ರಮುಖವಾದ ತಪ್ಪಾಗಿದೆ. ಅಂದರೆ ಈ ಸಮಿತಿ ವರದಿ ಕೊಟ್ಟ ನಂತರ ಇದು ಬಹಳ ಪ್ರಮುಖವಾದ ತೀರ್ಮಾನವಾಗಿದೆ ಎಂದು ಹೇಳುವುದಾದರೆ ಈ ಸಮಿತಿ ಇಲ್ಲದೆ ಇರುವುದಕ್ಕೋಸ್ಕರ 20 ವರ್ಷಗಳು ಏನಾದರೂ ಆ ವರದಿಗೋಸ್ಕರ ಏನಾದರೂ ಇದನ್ನು ತಡೆಹಿಡಿಯಲಾಗಿತ್ತೆ? ಅಥವಾ ಬೇರೆ ಬೇರೆ ಕಾರಣಗಳಿಂದ ಇದನ್ನು ತಡೆಹಿಡಿಯಲಾಗಿತ್ತಾ? ಇನ್ನೊಂದು ಸಮಿತಿಯನ್ನು ನೇಮಕ ಮಾಡುವುದಕ್ಕೆ ಎರಡೂ ಸರ್ಕಾರಗಳೂ ತೀರ್ಮಾನ ಮಾಡಿವೆ ಎನ್ನುವುದು ಮಾತುಕತೆಯಲ್ಲಿ ಬಂದಿರತಕ್ಕಂತಹ ಅಂಶ. ಎರಡು ವರ್ಷಗಳಿಂದ ಈ ನದಿ ನೀರಿಗಾಗಿ ಏನು ಮಾತುಕತೆ ನಡೆದಿದೆ, ಯಾವ ರೀತಿಯಾಗಿ ಅಧ್ಯಯನ ಸಮಿತಿ ನೀವು ರಚನೆ ಮಾಡುತ್ತೀರಿ, ಈಗಾಗಲೇ ಒಂದು ಅಧ್ಯಯನ ಸಮಿತಿ ವರದಿಯನ್ನು ಕೊಟ್ಟಿದೆ, ಆ ವರದಿ ಹಿನ್ನೆಲೆಯಲ್ಲಿ ಇಲ್ಲಿ ಚರ್ಚೆಯಾಗಿದೆ ಎನ್ನತಕ್ಕಂತಹ ಪ್ರಶ್ನೆ ಇಲ್ಲಿ ವರದಿಯಾಗಿದೆ. ನಮ್ಮ ಕರ್ನಾಟಕ ಸರ್ಕಾರ, ಗೋವ ಸರ್ಕಾರದ ಜೊತೆ ಯಾವ ರೀತಿಯಾಗಿ ಮಾತುಕತೆ ನಡೆಸಿದ್ದೀರಿ, ಆ ಮಾತುಕತೆಗಳ ವಿವರ ಏನು, ಬಹಳ ವರ್ಷಗಳ ಹಿಂದೆ ಇರುವ ಯೋಜನೆ ಕಾರ್ಯಗತ ಆಗುತ್ತಾ, ಹಿಂದೆ ಗೋವಾ ಸರ್ಕಾರ ಇದನ್ನು ನಿರಾಕರಣೆ ಮಾಡಿತ್ತು. ಈಗ ಯಾವ ಸ್ಥಿತಿಗೆ ಬಂದಿದೆ ಎನ್ನುವುದನ್ನು ತಿಳಿಸಬೇಕು.

ಶ್ರೀ ರಾಜಶೇಖರ ಶೀಲವಂತ (ಗುಳೇದಗುಡ್ಡ): ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಬಹಳ ವರ್ಷಗಳಿಂದ ನಾವು ಕೇಳುತ್ತಿದ್ದೇವೆ, ಮಹದಾಯಿ ನದಿಗೆ ನೀರನ್ನು ಡೈವರ್ಟ್ ಮಾಡಿ ಕರ್ನಾಟಕ ಮಲಪ್ರಭ ನದಿಗೆ ಕೊಡುತ್ತೇವೆ ಎನ್ನತಕ್ಕಂತಹ ಮಾತನ್ನು ಇದರ

ಸಲುವಾಗಿ ಹಿಂದೆ ಇದೇ ಸದನದಲ್ಲಿ ಸಾಕಷ್ಟು ಸದಸ್ಯರೂ ಕೂಡ ಮಾತನಾಡಿದ್ದರು. ಆ ಭಾಗದಿಂದ ಬಂದಿರತಕ್ಕತಹವರು ಸಾಕಷ್ಟು ತಮ್ಮ ಭಾವನೆಯನ್ನು ಹೇಳಿದ್ದಾರೆ. ಆದರೂ ಕೂಡ ಈವರೆಗೆ ಸಣ್ಣ ರಾಜ್ಯವಾಗಿರತಕ್ಕಂತಹ ಗೋವ ಜೊತೆಗೆ ದೊಡ್ಡ ರಾಜ್ಯವಾಗಿರತಕ್ಕಂತಹ ಕರ್ನಾಟಕದವರು ಹೋಗಿ ಪ್ರತಿ ಸಲ ಮಾತುಕತೆ ಮಾಡುವುದನ್ನು ನೋಡಿದರೆ ನಮಗೆ ಅಷ್ಟೊಂದು ಸಮಂಜಸ ಕಾಣುತ್ತಿಲ್ಲ. ಅದಕ್ಕೆ ಮುಖ್ಯವಾಗಿ ಮೊನ್ನೆ ಮಾರ್ಚ್ 27ನೇ ತಾರೀಖಿಗೆ ಅಲ್ಲಿಯ ನೀರಾವರಿ ಸಚಿವರಾದ ನಾರ್ವೇಕರ್ ಎನ್ನುವವರು ತಮ್ಮ ಸದನದಲ್ಲಿ ಉತ್ತರ ಕೊಡತಕ್ಕಂತಹ ಸಂದರ್ಭದಲ್ಲಿ ಹೇಳಿದ್ದಾರೆ. ಕರ್ನಾಟಕದವರು ಸಾಕಷ್ಟು ಸಲ ಮೀಟಿಂಗ್ ಮಾಡುವುದಕ್ಕೆ ಬರುತ್ತಾರೆ, ಆದರೆ ನಾವು ಮಾತ್ರ ಅದನ್ನು ಒಪ್ಪುವುದಿಲ್ಲ ಎಂದು ಅವರು ಹೇಳಿದ್ದಾರೆ. 'The Minister says Karnataka was welcome to hold any number of discussions on the issue but Goa would not allow diversion of water from the river. ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಆದರೆ ನಾವು ಪ್ರತಿ ಸಲ ಹೋಗುತ್ತಿದ್ದೇವೆ, ಒಂದು ಸಮಿತಿ ಮಾಡುತ್ತೇವೆ, ಅದು ಮಾಡುತ್ತೇವೆಂದು ಹೇಳುತ್ತಾ ಇದ್ದೇವೆ, ಆದರೆ ಈವರೆಗೂ ಈ ಯೋಜನೆ ಕಾರ್ಯರೂಪಕ್ಕೆ ಬರುತ್ತಿಲ್ಲ. ಮುಖ್ಯವಾಗಿ ಕಳಸದಲ್ಲಿ ಡ್ಯಾಂ ಕಟ್ಟಬೇಕಾಗಿದೆ, ಅದು ಕರ್ನಾಟಕ ಭಾಗದಲ್ಲಿ ಬರುತ್ತದೆ. ಅದಕ್ಕಾಗಿ ಕರ್ನಾಟಕದಲ್ಲಿ ನಾವು ಡ್ಯಾಂ ಕಟ್ಟುವುದಕ್ಕೆ ಪ್ರಾರಂಭ ಮಾಡಿದರೆ ತಾವು ತಾವಾಗಿಯೇ ಮಾತುಕತೆಗೆ ಬರುತ್ತಾರೆ. ಏನಾಗಬೇಕು ಅದೆಲ್ಲಾ ತಾನೇ ಆಗುತ್ತದೆ ಎನ್ನುವಂತಹ ವಿಚಾರ ಹೊಂದಿ, ಆ ಕಾರಣಕ್ಕಾಗಿ ಮೊನ್ನೆ ಏನು ಮಾತುಕತೆ ನಡೆದಿದೆ ಅದರ ವಿವರವನ್ನು ನಾಗೇಗೌಡರು ದಯವಿಟ್ಟು ಇಲ್ಲಿ ತಿಳಿಸಬೇಕು. ಆದಷ್ಟು ಶೀಘ್ರ ಆಗುವುದರಲ್ಲಿ ತಮಗೆ ಸಾಧ್ಯವಿದೆ ಎಂದು ತಾವು ಉತ್ತರ ಕೊಡಬೇಕೆಂದು ತಮ್ಮ ಮೂಲಕ ಅವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎನ್.ನಾಗೇಗೌಡ (ಭಾರಿ ನೀರಾವರಿ ಸಚಿವರು): ಮಾನ್ಯ ಅಧ್ಯಕ್ಷರೆ, ಮಹದಾಯಿ ರಿವರ್ ಬೆಳಗಾವಿ ಜಿಲ್ಲೆ ಖಾನಾಪುರ ಜಿಲ್ಲೆಯಲ್ಲಿ ಹರಿದು ಹೋಗುವುದರಿಂದ 201 ಟಿಎಮ್‌ಸಿ ನೀರು ಬರುತ್ತದೆ. ಅದರಲ್ಲಿ ನಮ್ಮ ಕ್ಯಾಚ್‌ಮೆಂಟ್ 55 ಟಿಎಮ್‌ಸಿ ನೀರು ಇದೆ. ಇಂಟರ್ ಸ್ಟೇಟ್ ರಿವರ್ ಹೋಗತಕ್ಕಂಥದ್ದನ್ನು ಮಾನ್ಯ ಸದಸ್ಯರಿಗೆ ತಿಳಿಸುತ್ತಾ ಬಹಳ ವರ್ಷಗಳಿಂದ ಇದನ್ನು ಮಹದಾಯಿ ರಿವರ್‌ನಲ್ಲಿ 9 ಟಿಎಮ್‌ಸಿ ನೀರನ್ನು ಮಲಪ್ರಭೆಗೆ ನಾವು ಡೈವರ್ಟ್ ಮಾಡಬೇಕೆಂದು ಹಾಗೂ ಹೈಡ್ರೋ ಎಲಕ್ಟ್ರಿಕಲ್ ಪ್ರಾಜೆಕ್ಟ್ ಮಾಡಬೇಕೆಂದು ಎರಡು ಸಲ ತೀರ್ಮಾನ ಆಗಿತ್ತು. ನಂತರ ಮತ್ತೆ ಬೇರೆ ಇರಿಗೇಷನ್ ಪ್ರಾಜೆಕ್ಟ್‌ಗೆ ತೆಗೆದುಕೊಳ್ಳಬೇಕೆಂದು ತೀರ್ಮಾನ ಮಾಡಿ ಮತ್ತೆ ಎರಡು ಸಾರಿ ಈ ಮೀಟಿಂಗ್ ಮಾಡಿದ್ದೇವೆ. 1995ರಲ್ಲಿ ನೀ.ವಿ. ಸಂಸ್ಥೆಗೆ ಕೊಡಲಾಗಿದೆ. (ನ್ಯಾಷನಲ್ ಎನ್‌ವಿರಾನ್‌ಮೆಂಟ್ ಇಂಡಿಯನ್ ಇನ್‌ಸ್ಟಿಟ್ಯೂಟ್) ಇದು ಬೆಳಗಾಂನಲ್ಲಿದೆ. ಒಂದು ಇಂಟರ್‌ನ್ಯಾಷನಲ್ ರೆಪ್ಯುಟೇಷನ್ ಇರತಕ್ಕಂತಹ

ಸಂಸ್ಥೆ. ಅದು ಎನ್‌ವಿರಾನ್‌ಮೆಂಟ್ ಮೇಲೆ ಏನು ಇಂಪ್ಯಾಕ್ಟ್ ಆಗುತ್ತದೆ ಎನ್ನತಕ್ಕಂಥದ್ದು ಸ್ಟಡಿ ಮಾಡಿಕೊಡಬೇಕೆಂದು 14 ತಿಂಗಳ ಕಾಲ ಟೈಮ್ ಕೊಟ್ಟು 35 ಲಕ್ಷ ರೂಪಾಯಿ ನಾವು ಒಪ್ಪಿಗೆ ಮಾಡಿ ಎರಡು ರಾಜ್ಯಗಳು ಒಪ್ಪಿಗೆ ಕಳುಹಿಸಿದ್ದು ಅದು ತೀರ್ಮಾನವಾಗಿ ಬಂದಿದೆ. ಆ ರಿಪೋರ್ಟ್ ನಾನು ಈಗಾಗಲೇ ಗೋವಾ ಸರ್ಕಾರದವರಿಗೆ ಕಳುಹಿಸಿಕೊಟ್ಟಿದ್ದೇನೆ. ನಿನ್ನೆ ಗೋವಾ ಸರ್ಕಾರದವರೂ ಸಹ ಅವರ ಕಾಬಿನೆಟ್‌ನಲ್ಲಿ ಒಂದು ಹೈ ಪವರ್ ಕಮಿಟಿ ಮಾಡಿ ಆ ರಿಪೋರ್ಟ್ ಮೇಲೆ ಅವರ ಕಾಮೆಂಟ್ಸ್‌ಗೆ ಆರು ತಿಂಗಳು ಟೈಮ್ ತೆಗೆದುಕೊಂಡಿದ್ದಾರೆ. ಈ ಸಂಸ್ಥೆ ಯಾವುದು ಎಂದು ಶ್ರೀರಾಮರೆಡ್ಡಿಯವರು ಕೇಳತಕ್ಕಂತಹ ವಿಚಾರಕ್ಕೆ, ಒಟ್ಟು ಒಂಭತ್ತು ಟಿ.ಎಮ್.ಸಿಯಲ್ಲಿ ಎರಡು ಫೇಸ್ ಇವೆ, ಒಂದು ಫೇಸ್ ಕಳಸ ಮತ್ತು ಅಲ್ತಾರ ಎಂದು ಎರಡು ಪ್ರಾಜೆಕ್ಟ್‌ಗಳಿಗೆ ಅವರು ತಾತ್ವಿಕವಾಗಿ ಟೆಕ್ನಿಕಲ್ ಫೀಸಿಬಿಲಿಟಿ ಎಷ್ಟು ನೀರು ಶೇಖರಣೆ ಮಾಡಬೇಕು, ಯಾವ ಸ್ಥಳದಲ್ಲಿ ಶೇಖರಣೆ ಮಾಡಬೇಕು, ಯಾವ ರೀತಿ ವಿತರಣೆ ಮಾಡಬೇಕು, ಎಷ್ಟು ಖರ್ಚು ಮಾಡಬೇಕು ಎನ್ನತಕ್ಕಂಥದ್ದರ ಬಗ್ಗೆ ತಾಂತ್ರಿಕವಾಗಿ ಸ್ಟಡಿ ಮಾಡುವುದಕ್ಕೆ ಅವರು ಒಪ್ಪಿಕೊಂಡಿದ್ದಾರೆ. ಆ ಫಸ್ಟ್ ಫೇಸನ್ನು ನಾವು ಕಳಸ ಮತ್ತು ಅಲ್ತಾರಕ್ಕೆ ಟೆಕ್ನಿಕಲ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿ ಮೂರು ತಿಂಗಳ ಒಳಗೆ ರಿಪೋರ್ಟ್ ಫೈನಲ್ ಮಾಡಬೇಕೆಂದು ಆಲೋಚನೆ ಮಾಡಿಕೊಂಡಿದ್ದೇವೆ. ಮೇ ತಿಂಗಳಲ್ಲಿ ಗೋವಾದ ಮಂತ್ರಿ ನಮ್ಮ ರಾಜ್ಯದಲ್ಲಿ ಬಂದು ಫೈನಲ್ ಮಾಡುವುದಕ್ಕೆ ಅವರು ಒಪ್ಪಿದ್ದಾರೆ. ಅದು ವಿನಾ ಕಾರಣ ಸಮುದ್ರಕ್ಕೆ ಹೋಗಿ ಬೀಳುತ್ತಿದೆ. ಅವರಿಗೂ ಸಮುದ್ರಕ್ಕೆ ಹೋಗಿ ಬಿದ್ದು ವೇಸ್ಟ್ ಆಗುತ್ತಿದೆ ಎಂದು ಅರ್ಥವಾಗಿದೆ. ಆದ್ದರಿಂದ ಮೇ ತಿಂಗಳಲ್ಲಿ ಅಥವಾ ಜೂನ್ ತಿಂಗಳ ಕೊನೆಯಲ್ಲಿ ನಾವು ಅಂತ್ಯಗೊಳಿಸುತ್ತೇವೆ. ಅವರು ಸರೆಂಡರ್ ಆಗಿದೆ ಕಟ್ಟಿಬಿಡಿ ಎಂದು ಹೇಳುತ್ತಾರೆ, ಇಂಟರ್ ಸ್ಟೇಟ್ ರಿವರ್ ಸಿಡಬ್ಲ್ಯೂಸಿಗೆ ಹೋಗಬೇಕಾಗಿದೆ. ಸಿಡಬ್ಲ್ಯೂಸಿಗೆ ಹೋಗದೆ ಇದ್ದರೆ ಅದು ಕೊಡುವುದಕ್ಕೆ ಬರುವುದಿಲ್ಲ. ದಯಮಾಡಿ ಮೇ ಜೂನ್‌ನಲ್ಲಿ ಇದು ಫಲಕಾರಿಯಾಗುತ್ತದೆ ಎಂಬ ನಂಬಿಕೆ ಇದೆ.

ಜ) ದೇವನಹಳ್ಳಿ ಕ್ಷೇತ್ರದಲ್ಲಿ ಭಾರಿ ಮಳೆಯಿಂದ ಉಂಟಾಗಿರುವ ಹಾನಿ ಬಗ್ಗೆ.

ಶ್ರೀ ಬಿ.ಚಂದ್ರಣ್ಣ (ದೇವನಹಳ್ಳಿ): ಮಾನ್ಯ ಅಧ್ಯಕ್ಷರೆ, ಶನಿವಾರ ಮತ್ತು ನಿನ್ನೆ ನಮ್ಮ ಕ್ಷೇತ್ರದಲ್ಲಿ ಭಾರಿ ಆಲಿಕಲ್ಲು ಮತ್ತು ಬಿರುಗಾಳಿ ಸಹಿತ ಮಳೆ ಬಿದ್ದಿರುವುದು ಬಹಳ ದುರಾದೃಷ್ಟಕರ, ಇದರಿಂದಾಗಿ ಬಹಳಷ್ಟು ಹಾನಿಯಾಗಿದೆ. ಸುಮಾರು 3-4 ಕೋಟಿ ರೂಪಾಯಿಗಳಷ್ಟು ರೈತರಿಗೆ ಹಾನಿಯಾಗಿದೆ. ನಿನ್ನೆ ಮೊನ್ನೆ ನಾವು ಸಹಿತ ಇಲಾಖಾಧಿಕಾರಿಗಳ ಮುಖೇನ ನಾವು ಭೇಟಿ ಮಾಡಿದ್ದೇವೆ. 40 ಹಳ್ಳಿಗಳು ಇದರಲ್ಲಿ ಒಳಪಡುತ್ತವೆ. ಇದರಲ್ಲಿ ಕಂದಾಯ ಇಲಾಖೆ ಇರಬಹುದು, ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಿದ್ದು ಮತ್ತು ಕೃಷಿ ಇಲಾಖೆಗೆ ಮತ್ತು ವಸತಿ ಇಲಾಖೆಗೂ ಸಹಿತ ಬರುತ್ತವೆ. ಸುಮಾರು 100ರಿಂದ 150 ಮನೆಗಳು ಇವತ್ತು ಹಾನಿಗೊಳಗಾಗಿವೆ. ತಾವು